ಹೆಂಗೆ ಹೇಳ್ತಿರೊ ಅಂಗೆ ಎಂದು ಆಶ್ವಾಸನೆ ಕೊಟ್ಟು ಗೌಡರನ್ನು ಬೀಳ್ಕೊಟ್ಟರು. ಎಲ್ಲೋ ಹೋಗಿದ್ದ ತಮ್ಮ ಮನೆ ಮಕ್ಕಳು ವಾಪಸ್ ಬಂದಾಗ ಈ ಸಡಗರವನ್ನು ಅವರ ಬಳಿಯೂ ಹೇಳಿಕೊಂಡರು. ಗೌಡನ ಕಿತಾಪತಿಯನ್ನ ಅರಿತ ಮಕ್ಕಳು ಆ ಮನ್ಯಾಳ ಗೌಡುನ್ನ ನೀವು ಹೆಂಗೆ ಹಟ್ಟಿ ಒಳಿಕೆ ಬಿಟ್ಕಂಡ್ರಿ ಎಂದು ರೇಗಿ, ಇದೆಲ್ಲ ನಡಿಯಲ್ಲ ನಮ್ಮ ಕಾಲೋನಿಗೆ ಯಾವ ಸ್ವಾಮಿಜೀನೂ ಬರೋದು ಬ್ಯಾಡ ಅಂತ ನಾಳೆ ಎಲ್ರೂ ಹೋಗಿ ಹೇಳಿ ಬರಬೇಕು ಎಂದು ತಾಕೀತು ಮಾಡಿದರು.

ಪೇಚಿಗೆ ಸಿಕ್ಕ ಹಿರಿಯರು ಮಾರನೆ ದಿನ ಗೌಡರ ಮನೆ ಮುಂದೆ ನಿಂತು ತಲೆ ಕೆರೆದುಕೊಂಡು, 'ಬುದ್ದಿ, ನಮ್ಮುಡುಗ್ರು ಯಂಗಂಗ ಆಡ್ತವೆ, ನಿಮ್ಮ ಸ್ವಾಮಿಗಳು ನಿಮ್ಮ ಕೇರಿಲೆ ಇರ್ಲಿ, ನಮ್ಮಟ್ಟಿತಕೆ ಬರದು ಬ್ಯಾಡ ತಗಳಿ, ಅವರಿಗ್ಯಾಕೆ ಮೈಲ್ಗೆ' ಎಂದರು. ಮಂಜೇಗೌಡರಿಗೆ ತಕ್ಷಣವೇ ಎಲ್ಲವೂ ಅರ್ಥವಾಗಿ, 'ಲೇ ಮಾದ, ನಿಮ್ಮನೆ ಅರ್ಧಂಬರ್ದ ಆಗ್ಯೆತೆ ಅಲ್ವ, ಮುಂದಿನ ಗ್ರಾಂಟ್‌ನ ಪಿಡಿಒಗೆ ಹೇಳಿ ತಡೆ ಹಿಡುಸ್ತಿನಿ ಅದ್ದೆಂಗೆ ಮನೆ ಕಟ್ತಿಯ ನೋಡ್ತಿನೋಗು' ಎಂದು, 'ಏನ್ಲ ಕರ್ಯ ನೀನು ಖಾತೆಗೆ ಕೊಟ್ಟಿದ್ದೆ ಅಲ್ವ, ಅದೆಂಗೆ ಖಾತೆ ಮಾಡಿಸ್ಕಂತಿಯ ಮಾಡಿಸ್ಕ' ಅಂತ ಜೋರು ದನಿಯಲ್ಲಿ ಆವಾಜು ಬಿಟ್ಟು, 'ನಾನು ಅನ್ಕೊಂಡಂಗೆ ಎಲ್ಲವೂ ನಡುದ್ರೇನೊ ಸರಿ, ಒಂಚೂರು ಹೆಚ್ಚು ಕಮ್ಮಿ ಆದ್ರೂ, ನೀವೂ ಇರಲ್ಲ ನಿಮ್ಮ ಹಟ್ಟಿನು ಇರಲ್ಲ ನೋಡ್ತಾ ಇರ್ರಿ' ಎಂದು ಉರಿಗಣ್ಣು ಬಿಟ್ಟರು. ಇದನ್ನ ಅಂದಾಜಿಸದಿದ್ದ ಹಟ್ಟಿ ಹಿರಿಯರು ಬೆಪ್ಪಾಗಿ ಬಂದು ಹಟ್ಟಿ ಹೊಕ್ಕು ರಾತ್ರೆಲ್ಲ ತಮ್ಮ ತಮ್ಮ ಮನೆಗಳಲ್ಲಿ ಗೌಡರು ಬಿಟ್ಟ ಉರಿಗಣ್ಣಿನ ಬಗೆಗೇ ಚರ್ಚಿಸಿದರು. ಅಂತಿಮವಾಗಿ ಒಂತರಹ ಬದುಕ್ತಿರ ನಾವು ಗೌಡ್ರುನ್ನ ಎದ್ರಾಕ್ಯೆಂಡು ಬಾಳ್ಮೆ ಮಾಡಕಾಗಲ್ಲ. ಆವೊತ್ತಿಂದಿನದ ಮಟ್ಟಿಗೆ ನಮ್ಮ ಹುಡುಗ್ರುಗಳನ್ನ ಊರು ಬಿಟ್ಟು ಎಲ್ಲರ ಕಳ್ಸನ, ಅವ್ರೇನ್ ಮಾಡ್ಕೆಂತರ ಮಾಡ್ಕೆಂಡು ಹೋಗ್ಲಿ ತೀರ ಆಮೇಲೆ ಬಂದ್ರಾಗುತ್ತೆ ಎಂಬಂತೆ ತೀರ್ಮಾನಿಸಿ ಅದನ್ನೆ ತಮ್ಮ ಬೆಳೆದು ನಿಂತಿರುವ ಮಕ್ಕಳಿಗೆ ಮುಟ್ಟಿಸಿದರು.

ಊರು ಬಿಡೋದ ಹೆಂಗೆ ಎಂಬುದರ ಬಗ್ಗೆ ಅಂತಿಮ ತೀರ್ಮಾನಕ್ಕಾಗಿ ಊರಾಚೆ ಸಭೆ ಸೇರಿದ್ದ ಹುಡುಗರು 'ಆ ನನ್ಮಗ ಗೌಡ ಎಂಥ ಆಟ ಆಕೆವ್ನೆ ನೋಡು, ಎಲೆಕ್ಷನ್ನಲ್ಲಿ ಸೋಲುಸ್ಬೇಕು ಅಂತ ಎಷ್ಟೆಲ್ಲ ಪ್ರಯತ್ನ ಹಾಕಿರೂ ಒಂಚೂರ್ರಲ್ಲಿ ಗೆದ್ಬುಟ್ಟ, ಈಗ ಕೆಲ್ಸ ಮಾಡ್ಕೊಡಲ್ಲ, ಕಟ್ತಿರ ಮನೆನ ಅರ್ಧಕ್ಕೆ ನಿಲ್ಲುಸ್ತಿನಿ ಅಂತ ಬೆದ್ರಿಕೆ ಹಾಕೆವ್ನಲ್ಲ ಇನ್ನೆಷ್ಟು ಜನುಕ್ಕೆ ಹುಟ್ಟಿಬರ್ಬೇಕು ಅವ್ನು' ಎಂದು ಬೈದುಕೊಳ್ಳುತ್ತಿರುವಾಗಲೇ, 'ನಮ್ಮಪ್ಪ ನಾಳಿಕೆ ನೀನೇನಾರ ಊರಲ್ಲಿದ್ರೆ ನೇಣಾಕ್ಯಂಡು ಸಾಯ್ತಿನಿ ಅಂತ ಹೇಳ್ಯೆತೆ' ಎಂದು ಮಲ್ಲಿಕ ಅಲವೊತ್ತುಕೊಂಡರೆ, ಸೂರಿ ನಮ್ಮವ್ವು ಅಂಗೆ ಹೇಳೆವ್ಳೆ ಎಂದ. ಊರು ಬಿಟ್ಟಾದರೂ ಸರಿಯೆ ಹೇಗಾದರು ಸ್ವಾಮಿಗಳು ಬರೋದನ್ನ ತಡಿಲೇ ಬೇಕು ಎಂದು ವಿಧವಿಧವಾಗಿ ಹೊಂಚು ಹಾಕಿದರೂ ಯಾವ ಪ್ಲಾನ್‌ಗಳೂ ನಡೆಯಲಾರದವು ಎಂದೇ ಎನಿಸತೊಡಗಿತು. ಕರುಣಾಳು ಸೇವಾ ಕೇಂದ್ರದ ರಂಗ ಮಾತ್ರ ತುಟಿ ಪಿಟಿಕ್ ಎನ್ನದೆ ಎಲ್ಲರ ಬೇಗುದಿಯನ್ನು ಸುಮ್ಮನೆ ಕೇಳಿಸಿಕೊಳ್ಳುತ್ತಿದ್ದ.

ಸ್ವಾಮೀಜಿಗಳು ಪಾದಪೂಜೆಗೆ ಬರುವ ಹಿಂದಿನ ದಿನವೇ ಊರೊಳ್ಳೋರೇ ಮುಂದೆ ನಿಂತು ಹಟ್ಟಿಗೆ ತಳಿರು ತೋರಣ ಕಟ್ಟಿಸಿದರು, ಟ್ಯಾಂಕರ್ ನೀರೊಡೆಸಿ ದೂಳು ಏಳದಂತೆ ತಡೆದರು. ನಾಕಾರು ಕಡೆ ಸ್ವಾಮೀಜಿಗಳು ಹಾಗೂ ಮಂತ್ರಿಗಳಿರುವ ಫ್ಲೆಕ್ಸ್ ಎಳೆದು ಕಟ್ಟಿದರು, ಶಾಮಿಯಾನ ಮೈಕು ಎಲ್ಲವೂ ಸಿದ್ಧವಾಗಿ ಹಟ್ಟಿಗೆ ಹಬ್ಬದ ಕಳೆಯೇ ಬಂದೊದಗಿತು.

ಇತ್ತ ಸ್ವಾಮಿಜಿಗಳೂ ತಮ್ಮ ಪಾದ ಪೂಜೆಯ ಯಶಸ್ವಿ ಹತ್ತನೇ ಕಾರ್ಯಕ್ರಮ ಇದಾಗಲಿದೆ, ಎಂದಿನಂತೆ ಮೀಡಿಯಾಗಳಲ್ಲಿ ತಾವು ಮಿಂಚುತ್ತಿರೋದಂತು ಗ್ಯಾರಂಟಿ, ಉಳಿದ ಮಠದವರು ಉರಿದುಕೊಂಡರೆ ಉರಿದುಕೊಳ್ಳಲಿ, ಅದಕ್ಕೆ ನಾನು ಹೊಣೆಯೆ! ಬೇಕಾದರೆ ಅವರೂ ನೆರವೇರಿಸಲಿ. ಶುರು ಮಾಡಿರೋದ್ರಲ್ಲಿ ಮೊದಲಿಗ ನಾನೆ ಎಂಬುದು ಜಗತ್ತಿಗೆ ತಿಳಿದಿದೆ. ಉಳಿದವರು ಏನೇ